



# ಕಲೆಗೆ ಬೆರಳಿನ ಹಂಗಿಲ್ಲ!

ಕೈ ಬೆರಳುಗಳಿಲ್ಲದಿದ್ದರೆ ಏನನ್ನೂ ಹಿಡಿಯಲು ಬರುವುದಿಲ್ಲ, ಯಾವ ಕೆಲಸವನ್ನೂ ಮಾಡಲು ಬರುವುದಿಲ್ಲ. ಇನ್ನು ಆಭರಣ ತಯಾರಿಕೆಯಂಥ ಕುಸುರಿ ಕೆಲಸ ಮಾಡಲು ಸಾಧ್ಯವೇ? ಹೌದು ಇದು ಸಾಧ್ಯವೆಂದು ತೋರಿಸುತ್ತಿರುವ ಪ್ರವೀಣೆಯೊಬ್ಬಳು ಇಂಗ್ಲೆಂಡ್‌ನ ಸಾಮರ್ಸೆಟ್‌ನ ಫ್ರೋಮ್‌ನಲ್ಲಿ ಇದ್ದಾಳೆ. ಅನ್ನೆಟ್ಟೆ ಗ್ಯಾಟೆಡ್ ಹೆಸರಿನ 49 ವರ್ಷ ವಯಸ್ಸಿನ ಈ ಮಹಿಳೆಯು, ಡಿಸೈನರ್ ಆಭರಣ ತಯಾರಿಕೆಯಲ್ಲಿ ಮಾಸ್ಟರ್ ಎನ್ನಿಸಿಕೊಂಡಿದ್ದಾಳೆ. ಮದುವೆ ಉಂಗುರಗಳು, ಬ್ರೇಸ್ಲೆಟ್, ನೆಕ್ಲೇಸ್, ಕಿವಿಯೋಲೆ ಮುಂತಾದವುಗಳನ್ನು ವಜ್ರ, ಗೋಮೇಧಿಕ ಇತರೆ ಬೆಲೆಬಾಳುವ ರತ್ನಗಳನ್ನು ಅಂದವಾಗಿ ಕೂರಿಸಿ ಒಡವೆಗಳನ್ನು ತಯಾರಿಸಿಕೊಂಡುತ್ತಾಳೆ.

ಲಂಡನ್‌ನ ಹೆಸರಾಂತ ಜ್ಯುವೆಲ್ಲರಿ ಎಕ್ಸ್‌ಪರ್ಟ್ ಹತ್ತಿರ ತರಬೇತಿ ಪಡೆಯುವ ಮೊದಲು ಅನ್ನೆಟ್ಟೆ ಗ್ಯಾಟೆಡ್ ಸ್ಕೂಲ್ ಹಾಗೂ ಕಾಲೇಜಿನಲ್ಲಿ ಅಭರಣ ತಯಾರಿಕೆಯ ಅಭ್ಯಾಸ ಮಾಡಿದ್ದಾಳೆ. 24 ವರ್ಷಗಳ ಹಿಂದೆ ಸಾಮರ್ಸೆಟ್‌ಗೆ ಬಂದಿರುವ ಈಕೆ ತನಗೆ ಮನೆಯವರಿಂದ ಬಹಳಷ್ಟು ಉತ್ತೇಜನ ಸಿಕ್ಕಿದೆ ಎಂದು ಹೇಳುತ್ತಾಳೆ.



ಚಿನ್ನ ಮತ್ತು ಬೆಳ್ಳಿಯ ಆಭರಣ ತಯಾರಿಕೆಯಲ್ಲಿ ಅನ್ನೆಟ್ಟೆ ಎಷ್ಟು ಪರಿಣಿತಳೆಂದರೆ ತನಗೆ ಬೆರಳುಗಳಿಲ್ಲದಿದ್ದರೂ ಈಕೆ ಅದಕ್ಕಾಗಿ ವಿಶೇಷ ಸಾಧನಗಳನ್ನು ಉಪಯೋಗಿಸುವುದಿಲ್ಲ. ಮುಂಗೈಗೆ ಚರ್ಮದ ರಿಸ್ಟ್ ಸ್ಟ್ರ್ಯಾಪ್ ಕಟ್ಟಿಕೊಂಡು ಅದರಲ್ಲಿ ಉಜ್ಜುವ ಸಾಧನಗಳನ್ನು ಇರಿಸಿಕೊಂಡು ಕೆಲಸ ಮಾಡುತ್ತಾಳೆ.

'ನಾನು ಎಲ್ಲರಂತೆ ಇದ್ದೇನೆ. ನನಗೆ ಯಾವುದೇ ಅಂಗ ಊನವಿಲ್ಲ. ಎಲ್ಲರೂ ನನ್ನ ಕುಸುರಿ ಕೆಲಸವನ್ನು ಬಹಳವಾಗಿ ಮೆಚ್ಚಿಕೊಳ್ಳುತ್ತಾರೆ. ಆಭರಣ ತಯಾರಿಕೆಯು ಕೈಯಿಂದ ಮಾಡುವ ಕಲೆ, ಇದಕ್ಕೆ ಸ್ಪರ್ಶ ಜ್ಞಾನವಿರಬೇಕು. ಜನರು, ನೀನು ದಿನದ ಕೆಲಸಗಳನ್ನು ಹೇಗೆ ಮಾಡುತ್ತೀ? ಆಭರಣಗಳನ್ನು ಹೇಗೆ ತಯಾರಿಸುತ್ತೀ? ಎಂದೆಲ್ಲಾ ಪ್ರಶ್ನಿಸುತ್ತಾರೆ. ಅವರಿಗೆಲ್ಲಾ ನೀವೆಲ್ಲಾ ಹೇಗೆ ಮಾಡುತ್ತೀರೋ ಹಾಗೆಯೇ ಎಂದು ಉತ್ತರಿಸುತ್ತೇನೆ' ಎಂದು ಹೇಳುವ ಈಕೆ, ಫ್ರೋಮ್‌ನಲ್ಲಿ ತನ್ನದೇ ಸ್ವಂತ ಡಿಸೈನರ್ ಆಭರಣ ಮಳಿಗೆಯನ್ನು ಇಟ್ಟುಕೊಂಡಿದ್ದಾಳೆ. ಈಗ ಅನ್ನೆಟ್ಟೆ ಗ್ಯಾಟೆಡ್ ಬ್ರಿಟನ್ ದೇಶದ ಅತ್ಯುನ್ನತ ಕ್ರಾಫ್ಟ್‌ಮನ್ ಹಾಗೂ ಒಪಲ್ ಸ್ಪೆಶಲಿಸ್ಟ್‌ರಲ್ಲಿ ಒಬ್ಬಳೆಂದು ಪ್ರಖ್ಯಾತಿ ಗಳಿಸಿದ್ದಾಳೆ.

■ ಪ್ರಿಯಾಂಕ. ವಿ. ಹೆಚ್.

